


ಹೃದ್ರೋಗ ನಿವಾರಣೆಗೆ ನಡೆಸುವ ಕೀಹೋಲ್ ಸರ್ಜರಿ ಪರಿಣಾಮಕಾರಿಯಾಗಿದ್ದು, ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಈ ಸರ್ಜರಿಗೊಳಪಟ್ಟು ಹಲವಾರು ರೋಗಿಗಳು ಗುಣಮುಖರಾಗಿದ್ದಾರೆ. ಹೃದಯ ಬೇನೆ ಎಂದು ವೇದನೆಪಡುವವರಿಗೆ ಈ ಸರ್ಜರಿ ಆಶಾಕಿರಣವಾಗಿದ್ದು, ಗಾಬರಿಯಾಗುವ ಅಗತ್ಯವಿಲ್ಲ ಎಂಬುದನ್ನು ತಜ್ಞ ವೈದ್ಯರು ಸಾರಿದ್ದಾರೆ.

■ ಉಮಾ ಅನಂತ್

# ಹೃದಯದ ಕೀಹೋಲ್ ಸರ್ಜರಿ ಬೇಡ ಗಾಬರಿ

ಯಾವುದೇ ಕಾಯಿಲೆ ಇಲ್ಲವೆಂದು ಮೇಲ್ನೋಟಕ್ಕೆ ಕಂಡುಬಂದ ಅನೇಕ ಚಿಕ್ಕ ವಯಸ್ಸಿನವರ ಹಠಾತ್ ಸಾವಿನ ಪ್ರಕರಣಗಳು ಇತ್ತೀಚೆಗೆ ವರದಿಯಾಗುತ್ತಲೇ ಇವೆ. ಆಟ ಆಡುತ್ತಾ, ಕುಣಿಯುತ್ತಾ ಖುಷಿಖುಷಿಯಾಗಿ ಬಾಳಿ ಬದುಕಬೇಕಾದ ಮಕ್ಕಳು ಪುಟ್ಟ ವಯಸ್ಸಿಗೇ ಸಾವಿನ ಮನೆಯ ಕದ ತಟ್ಟುತ್ತಿದ್ದಾರೆ. ಯುವಕರು ಮಸಣದತ್ತ ಪಯಣ ಬೆಳೆಸುತ್ತಿರುವುದು ಆತಂಕಕಾರಿ ಸಂಗತಿ. ಇದು ಪೋಷಕರ, ಬಂಧುಬಳಗದವರ ಕಳವಳಕ್ಕೆ ಕಾರಣವಾಗುವ ವಿಷಯವೂ ಆಗಿದೆ. ಹಿರಿಯರೂ ಸದ್ದಿಲ್ಲದೆ ಹೃದಯಾಘಾತ ಅನುಭವಿಸಿ ಬಾರದ ಊರಿಗೆ ತೆರಳುತ್ತಿರುವುದು ದುರಂತ. ಅದರಲ್ಲೂ ಕುಟುಂಬದ ಆಧಾರ ಸ್ತಂಭಗಳೇ ಕುಸಿದು ಬೀಳುತ್ತಿರುವುದು ಖೇದಕರ. ಇಂಥ ಹೃದಯಾಘಾತಗಳಿಗೆ 'ಜೀವನಶೈಲಿ ಬದಲಾವಣೆಯೇ ಕಾರಣ' ಎಂಬುದು ವೈದ್ಯರ ಅಭಿಮತ.



ಡಾ. ರಾಜೇಶ್ ಕಿಶನ್ ರಾವ್

ಜಾಗತಿಕ ವಿದ್ಯಮಾನವನ್ನು ಗಮನಿಸಿದರೆ ಹೃದಯಾಘಾತದಿಂದ ಕಿರಿಯ ವಯಸ್ಸಿನವರು ಹೆಚ್ಚು ಮೃತಪಡುತ್ತಿರುವುದು ಭಾರತದಲ್ಲೇ ಅತಿ ಹೆಚ್ಚು. ಇದನ್ನು 'ವಿಶ್ವ ಆರೋಗ್ಯ ಸಂಸ್ಥೆ'ಯ (WHO) ಅಧ್ಯಯನವೂ ಸಾಬೀತುಪಡಿಸಿದೆ. ಇಡೀ ಜಗತ್ತಿನ ಹೃದ್ರೋಗಿಗಳ ಸಂಖ್ಯೆಯಲ್ಲಿ ಶೇ.15ರಷ್ಟು ಭಾರತೀಯರಿದ್ದಾರೆ. ಇದಕ್ಕೆ ಕಾರಣ ಇತ್ತೀಚಿನ ದಿನಗಳಲ್ಲಿ ದುಡಿಯುವ ಮಂದಿ ಹೆಚ್ಚಿನ ಉದ್ವಿಗ್ನತೆ, ಅಧಿಕ ರಕ್ತದೊತ್ತಡ, ಮಧುಮೇಹ ಹಾಗೂ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿರುವುದು, ಧೂಮಪಾನ, ಮದ್ಯವ್ಯಸನಕ್ಕೆ ತುತ್ತಾಗುತ್ತಿರುವುದೇ ಆಗಿದೆ.

ಹೃದ್ರೋಗ ನಿವಾರಣೆಗೆ ಅನೇಕ ರೀತಿಯ ಚಿಕಿತ್ಸೆಗಳಿವೆ. ಶಸ್ತ್ರಚಿಕಿತ್ಸೆಗಳೂ ಇವೆ. ಇವುಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಮಿನಿಮಲಿ ಇನ್‌ವೇಸಿವ್ ಸರ್ಜರಿ ಅಥವಾ ಕೀಹೋಲ್ ಸರ್ಜರಿಯೂ ಒಂದು.

ಬೆಂಗಳೂರಿನ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಈ ಸೌಲಭ್ಯವಿದ್ದು, ಮಕ್ಕಳೂ ಸೇರಿದಂತೆ ಹಲವಾರು ರೋಗಿಗಳನ್ನು ಗುಣಪಡಿಸಿದ ಸರ್ಕಾರಿ ಆಸ್ಪತ್ರೆ ಎಂಬ ಗರಿಮೆ ಇದಕ್ಕಿದೆ. ಇದುವರೆಗೆ ಈ ಆಸ್ಪತ್ರೆಯಲ್ಲಿ 600 ಕೀಹೋಲ್ ಸರ್ಜರಿಗಳನ್ನು ಯಶಸ್ವಿಯಾಗಿ ಪೂರೈಸಲಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರಚಿಕಿತ್ಸಕ ಡಾ. ರಾಜೇಶ್ ಕಿಶನ್ ರಾವ್ **'ಸುಧಾ'** ಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ಹೃದ್ರೋಗ, ಕೀಹೋಲ್ ಸರ್ಜರಿ ಬಗ್ಗೆ ಸಮಗ್ರವಾದ ಮಾಹಿತಿ ನೀಡಿದ್ದಾರೆ.

**◆ ಇತ್ತೀಚೆಗೆ ಹೃದ್ರೋಗ, ಹೃದಯಾಘಾತ ಹೆಚ್ಚಾಗಲು ಕಾರಣಗಳೇನು?**

ಹೃದ್ರೋಗ ಬರಲು ಪ್ರಮುಖವಾಗಿ ಎರಡು ಕಾರಣಗಳಿರುತ್ತವೆ. ಒಂದು ಆನುವಂಶಿಕವಾಗಿ ಬರುವುದು. ಇದನ್ನು ಕಂಜೆನಿಟಲ್ ಹಾರ್ಟ್ ಡಿಸೀಸ್ (congenital heart disease) ಎಂದು ಕರೆಯಲಾಗುತ್ತದೆ. ಜೀನ್ಸ್‌ನಿಂದ ಹೃದಯ ತೊಂದರೆ ಬರುವಂಥದ್ದು. ಗರ್ಭಿಣಿಯಾಗಿದ್ದಾಗ ರುಬೆಲ್ಲಾ ಮುಂತಾದ ವೈರಾಣು ಸೋಂಕು ತಗುಲಿದ್ದರೆ, ಜ್ವರ ಬಂದಿದ್ದರೆ ಹುಟ್ಟುವ ಮಗುವಿನ ಹೃದಯದಲ್ಲಿ ಸಮಸ್ಯೆ ಇರುತ್ತದೆ, ಹೃದಯಾಘಾತಕ್ಕೆ ಆನುವಂಶೀಯತೆಯೂ ಕಾರಣವಾಗುತ್ತಿದೆ. ಮಕ್ಕಳ ತಂದೆತಾಯಿಯರಿಗೆ, ಅಜ್ಜ ಅಜ್ಜಿಯರಿಗೆ ಇದ್ದ ಕೆಲವೊಂದು ಕಾಯಿಲೆಗಳು ಮಕ್ಕಳಿಗೂ ಬಂದಿರುತ್ತದೆ. ಅದು ಪತ್ತೆಯೇ ಆಗಿರುವುದಿಲ್ಲ.